## ದಿನಾಂಕ 11-09-2015 ರಂದು ನಡೆದ ಕರ್ನಾಟಕ ಮಾಹಿತಿ ಆಯೋಗದ ರಾಜ್ಯ ಮುಖ್ಯ ಮಾಹಿತಿ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು

**ಸಭೆಯಲ್ಲಿ ಹಾಜರಿದ್ದವರು:-**

1) ಶ್ರೀ ಟ. ರಾಮನಾಯಕ್. ರಾಜ್ಯ ಮುಖ್ಯ ಮಾಹಿತಿ ಆಯುಕ್ತರು (ಪ್ರ).
2) ಶ್ರೀ ಎಲ್. ಕೃಷ್ಣಮೂರ್ತಿ. ರಾಜ್ಯ ಮಾಹಿತಿ ಆಯುಕ್ತರು.
3) ಶ್ರೀ ಶಂಕರ್ ಆರ್. ಪಾಟೀಲ್. ರಾಜ್ಯ ಮಾಹಿತಿ ಆಯುಕ್ತರು.
4) ಶ್ರೀ ವೃಷಭೇಂದ್ರ ಮೂರ್ತಿ. ಕಾರ್ಯದರ್ಶಿ.
5) ಶ್ರೀಮತಿ ಶ್ರೀಲತ ಕೋಟೆಮಠ್. ಅಧೀನ ಕಾರ್ಯದರ್ಶಿ.

ಸಭೆಯಲ್ಲಿ ಈ ಕೆಳಕಂಡ ವಿಷಯಗಳನ್ನು ಚರ್ಚಿಸಲಾಯಿತು.

ದಿನಾಂಕ:03-09-2015 ರಂದು ನಡೆದ ಸಭೆಯ ಅನುಪಾಲನಾ ವರದಿಯನ್ನು ಮಾನ್ಯ ಕಾರ್ಯದರ್ಶಿಗಳು ಸಭೆಗೆ ತಿಳಿಸಿದರು.

1) ಕರ್ನಾಟಕ ಮಾಹಿತಿ ಆಯೋಗದ ಕಟ್ಟಡದ ನಿರ್ಮಾಣದ ಕುರಿತು ಕರ್ನಾಟಕ ಮಾಹಿತಿ ಆಯೋಗದ ಹೊಸ ಕಟ್ಟಡದ ನಿರ್ಮಾಣದ ಒಳಾಂಗಣ ವಿನ್ಯಾಸದ ಬಗ್ಗೆ ದಿನಾಂಕ:04-09-2015 ರಂದು ನಡೆದ ಸಭೆಯಂತೆ ಕಾರ್ಯಪಾಲಕ ಅಭಿಯಂತರರಿಗೆ ಈಗಾಗಲೇ ಪತ್ರಿಸಲಾಗಿದೆ ಎಂಬ ವಿಷಯವನ್ನು ಕಾರ್ಯದರ್ಶಿಗಳು ಸಭೆಗೆ ತಿಳಿಸುತ್ತಾ, Furniture Layout ಸಿದ್ಧಪಡಿಸಿ ಮತ್ತೊಮ್ಮೆ ಲೇಔಟ್ ಪ್ಲಾನ್ ನೀಡಲು ಕಾರ್ಯಪಾಲಕ ಅಭಿಯಂತರರಿಗೆ ತಿಳಿಸಲಾಗಿದೆ ಎಂದು ತಿಳಿಸಿದರು.

2) ಕರ್ನಾಟಕ ಮಾಹಿತಿ ಆಯೋಗದ ಆದೇಶ ಸಂಖ್ಯೆ: ಕೆಐಸಿ/9756/ಎಪಿಎಲ್/2014ರ ಬಗ್ಗೆ ಪತ್ರ ಬರೆಯಲಾಗಿದೆ ಎಂದು ಸಭೆಗೆ ಕಾರ್ಯದರ್ಶಿಗಳು ಸೂಚಿಸಿದರು.

3) ಕಾನೂನು ಅಧಿಕಾರಿಗಳ ನೇಮಕಾತಿ ಕುರಿತು ಚರ್ಚಿಸಿದಂತೆ ರಿಜಿಸ್ಟ್ರಾರ್ ಮಾನ್ಯ ಉಚ್ಚ ನ್ಯಾಯಾಲಯರವರಿಗೆ ಪತ್ರಿಸಿರುವುದಾಗಿ ಕಾರ್ಯದರ್ಶಿಯವರು ಸಭೆಗೆ ತಿಳಿಸಿದರು.

4) ಕರ್ನಾಟಕ ಮಾಹಿತಿ ಆಯೋಗದ ಆಯುಕ್ತರ ವಾಹನಗಳಿಗೆ ಅಂಬರ್ ಲೈಟ್ ಅಳವಡಿಸುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುವುದಾಗಿ ಸಭೆಗೆ ತಿಳಿಸಿದರು.

5) ಈ ದಿನದ ಅಜೆಂಡಾದಂತೆ ಶ್ರೀ ವೀರೇಶ್‌ರವರು ಆಯೋಗಕ್ಕೆ ಬರೆದಿರುವ ಪತ್ರವನ್ನು ಅಡ್ವೋಕೇಟ್ ಜನರಲ್‌ರವರಿಗೆ ಅಭಿಪ್ರಾಯ ಕೋರಿ ಪತ್ರಿಸಲು ಸಭೆ ಕಾರ್ಯದರ್ಶಿಯವರಿಗೆ ಸೂಚಿಸಿತು.

ಕ್ರಮ:ಕಾರ್ಯದರ್ಶಿ

6) ಕರ್ನಾಟಕ ಮಾಹಿತಿ ಆಯೋಗದ ಹೊಸ ಕಟ್ಟಡದಲ್ಲಿ ಸಿಸಿ ಟಿವಿ ಕ್ಯಾಮರಾಗಳನ್ನು, ಕಸ್ಟಮರ್ ಫ್ರೇಂಡ್ಲಿ ಕೀಯೋಕ್ಸ್, ಡಿಸೇಬಲ್ ಫ್ರೇಂಡ್ಲಿ ಶೌಚಾಲಯಗಳನ್ನು ಅಳವಡಿಸಲು ಕ್ರಮ ಕೈಗೊಳ್ಳುವಂತೆ ಕಾರ್ಯಪಾಲಕ ಅಭಿಯಂತರರಿಗೆ ಸೂಚಿಸಬೇಕೆಂದು ಸಭೆ ಕಾರ್ಯದರ್ಶಿಯವರಿಗೆ ಸೂಚಿಸಿತು.

7/10/15

ರಾಜ್ಯ ಮುಖ್ಯ ಮಾಹಿತಿ ಆಯುಕ್ತರು (ಪ್ರ)